# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1162 |
| 2 ಸದಸ್ಯರ ಹೆಸರು | : | ಶ್ರೀ ಟಿ.ಎನ್.ಜವರಾಯಿಗೌಡ (ವಿಧಾನಸಭೆಯಿಂದ ಚುನಾಯಿತರಾದವರು) |
| 3 ಉತ್ತರಿಸುವ ದಿನಾಂಕ | : | 19-12-2024 |
| 4 ಉತ್ತರಿಸುವವರು | : | ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ನಗರದ ತ್ಯಾಜ್ಯ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಸಲುವಾಗಿ ಬೆಂಗಳೂರಿನ ಹೊರಗಡೆ 4 ದಿಕ್ಕುಗಳಲ್ಲಿ ಘನತ್ಯಾಜ್ಯ ನಿರ್ವಹಣಾ ಘಟಕ ಸ್ಥಾಪಿಸಲು ರಾಜ್ಯ ಸರ್ಕಾರ ಅನುಮೋದನೆ ನೀಡಿದೆಯೇ; ಹಾಗೂ ಟೆಂಡರ್ ಕರೆಯುವ ಪ್ರಕ್ರಿಯೆ ಯಾವ ಹಂತದಲ್ಲಿದೆ; (ವಿವರ ನೀಡುವುದು) | ಹೌದು.<br>• ಟೆಂಡರ್ ಅಧಿಸೂಚನೆ ಸಂ:DGM-1/BSWML/TEND/08/2024-25, dated:07.11.2024 ರಲ್ಲಿ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. |
| ಆ | ಹಾಗಿದ್ದಲ್ಲಿ, ಆ 4 ಸ್ಥಳಗಳು ಯಾವುವು; ಹಾಗೂ ಎಷ್ಟು ಎಕರೆ ಜಾಗವನ್ನು ಈ ಉದ್ದೇಶಕ್ಕಾಗಿ ಸ್ವಾಧೀನ ಪಡಿಸಿಕೊಳ್ಳಲಾಗುತ್ತಿದೆ; ಸದರಿ ಜಾಗವು ಸರ್ಕಾರದ ಜಮೀನೋ ಅಥವಾ ಖಾಸಗಿಯವರಿಂದ ಸ್ವಾಧೀನ ಪಡಿಸಿಕೊಳ್ಳಲಾಗುತ್ತಿದೆಯೇ; (ಸಂಪೂರ್ಣ ವಿವರಗಳೊಂದಿಗೆ ಮಾಹಿತಿ ಒದಗಿಸುವುದು) | ಸಮಗ್ರ ತ್ಯಾಜ್ಯ ನಿರ್ವಹಣೆಗಾಗಿ ಪಾಲಿಕೆಯ 4 ದಿಕ್ಕುಗಳಲ್ಲಿ ಜಾಗಗಳನ್ನು ತಾತ್ಕಾಲಿಕವಾಗಿ ಗುರುತಿಸಲಾಗಿರುತ್ತದೆ.<br>• ಗೊಲ್ಲಹಳ್ಳಿ ಸರ್ವೆ ನಂ:39&58ರ ಪ್ರದೇಶದ 100 ಎಕರೆ ಜಮೀನನ್ನು ನೈಸ್ ಸಂಸ್ಥೆಯಿಂದ (ಕೆ.ಐ.ಎ.ಡಿ.ಬಿ) ಹಿಂಪಡೆದು ಬಿಎಸ್‌ಡಬ್ಲ್ಯೂಎಂಎಲ್/ಬಿಬಿಎಂಪಿಗೆ ಹಸ್ತಾಂತರಿಸಿಕೊಳ್ಳುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br>• ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡಬೆಳವಂಗಲ ಹೋಬಳಿ ಗುಂದಲಹಳ್ಳಿ ಗ್ರಾಮದಲ್ಲಿ ಮೆ.ಟೆರಾಫಾರ್ಮ ಸಂಸ್ಥೆಯು ನಿರ್ವಹಿಸುತ್ತಿದ್ದ ಸ್ಥಗಿತಗೊಂಡಿರುವ ತ್ಯಾಜ್ಯ ಸಂಸ್ಕರಣಾ ಘಟಕವನ್ನು ಸಮಗ್ರ ತ್ಯಾಜ್ಯ ವಿಲೇವಾರಿ ಘಟಕವನ್ನು ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆ ಚಾಲ್ತಿಯಲ್ಲಿದೆ.<br>• ಹೇರೋಹಳ್ಳಿಯಲ್ಲಿರುವ ಕೆ.ಐ.ಎ.ಡಿ.ಬಿ.ಗೆ ಸೇರಿದ ಸುಮಾರು 100 ಎಕರೆ ಪ್ರದೇಶವನ್ನು ಹಸ್ತಾಂತರಿಸಿಕೊಳ್ಳಲು ಯೋಜಿಸಲಾಗಿದೆ.<br>• ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಸುಮಾರು 100 ಎಕರೆ ಪ್ರದೇಶವನ್ನು ಹಸ್ತಾಂತರಿಸಿಕೊಳ್ಳಲು ಕ್ರಮವಹಿಸಲಾಗುತ್ತಿದೆ. |

. . .2/-

<table>
<tr>
<td>ಇ</td>
<td>ಬೆಂಗಳೂರು ನಗರದ ಸಮಗ್ರ ಘನತ್ಯಾಜ್ಯ ನಿರ್ವಹಣೆಗೆ ವಾರ್ಷಿಕವಾಗಿ ಬೇಕಾಗಿರುವ ಅನುದಾನವೆಷ್ಟು; ಯಾವ ಯಾವ ಖಾಸಗಿ ಕಂಪನಿಗಳಿಗೆ ಈ ನಿರ್ವಹಣೆಯ ಜವಾಬ್ದಾರಿಯನ್ನು ವಹಿಸಲಾಗುತ್ತಿದೆ; ಇದರ ಮಾನದಂಡಗಳೇನು; (ಸಂಪೂರ್ಣ ವಿವರಗಳೊಂದಿಗೆ ಮಾಹಿತಿ ಒದಗಿಸುವುದು)</td>
<td>
• ಸಮಗ್ರ ಘನತ್ಯಾಜ್ಯ ನಿರ್ವಹಣೆಗೆ ಯೋಜನೆಯಲ್ಲಿ ಘನತ್ಯಾಜ್ಯ ಸಂಗ್ರಹಣೆ ಹಾಗೂ ಸಂಸ್ಕರಣೆ ಕಾರ್ಯಗಳನ್ನು ನಿರ್ವಹಿಸಲು ಪಿ.ಪಿ.ಪಿ. ಮಾದರಿಯಲ್ಲಿ ಆಯ್ಕೆಯಾಗುವ ಏಜೆನ್ಸಿಗಳಿಗೆ ದರಗಳನ್ನು ಪ್ರತಿ ಟನ್ ತ್ಯಾಜ್ಯಕ್ಕೆ ಟಿಪ್ಪಿಂಗ್ ಫೀ ಆಧಾರಿತವಾಗಿ, ತ್ಯಾಜ್ಯ ಸಂಗ್ರಹಣೆ ಮತ್ತು ಸಾಗಾಣಿಕೆಗೆ ಪ್ರತಿ ಟನ್‌ಗೆ ರೂ. 2343/- ಗಳನ್ನು ಹಾಗೂ ತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿಗೆ ಪ್ರತಿ ಟನ್‌ಗೆ ರೂ. 655/- ಗಳನ್ನು ಪಾವತಿಸಲು ಉದ್ದೇಶಿಸಲಾಗಿರುತ್ತದೆ.<br>
• ಇದರಿಂದ ವಾರ್ಷಿಕವಾಗಿ ಅಂದಾಜು ರೂ. 523.00 ಕೋಟಿಗಳು ತ್ಯಾಜ್ಯ ಸಂಗ್ರಹಣೆ ಮತ್ತು ಸಾಗಾಣಿಕೆಗೆ ಹಾಗೂ ರೂ. 146.00 ಕೋಟಿಗಳು ತ್ಯಾಜ್ಯ ಸಂಸ್ಕರಣೆಗಾಗಿ ವೆಚ್ಚವಾಗಬಹುದೆಂದು ಅಂದಾಜಿಸಲಾಗಿರುತ್ತದೆ.<br>
• ಪ್ರಸ್ತುತ ಯಾವುದೇ ನಿರ್ದಿಷ್ಟ ಸಂಸ್ಥೆಯನ್ನು ಗುರುತಿಸಿರುವುದಿಲ್ಲ; ಟೆಂಡರ್ ಪ್ರಕ್ರಿಯೆಯಲ್ಲಿ ಆಯ್ಕೆಯಾಗಬೇಕಿರುತ್ತದೆ.
</td>
</tr>
<tr>
<td>ಈ</td>
<td>ತ್ಯಾಜ್ಯ ಉತ್ಪಾದಕರಿಂದ ಬಳಕೆದಾರರ ಶುಲ್ಕವನ್ನು ಎಷ್ಟು ಪ್ರಮಾಣದಲ್ಲಿ ವಸೂಲಿ ಮಾಡಲು ಸರ್ಕಾರ ನಿರ್ಧಾರ ಮಾಡಿದೆ; ಬಳಕೆದಾರರಿಂದ ಬರುವ ವಾರ್ಷಿಕ ಶುಲ್ಕವೆಷ್ಟು;</td>
<td>
ಪಾಲಿಕೆ ವ್ಯಾಪ್ತಿಯಲ್ಲಿ ಗೃಹ ತ್ಯಾಜ್ಯ ಉತ್ಪಾದಕರಿಗೆ ಕಟ್ಟಡದ ವಿಸ್ತೀರ್ಣದ ಆಧಾರದ ಮೇಲೆ ಮತ್ತು ವಾಣಿಜ್ಯ ಹಾಗೂ ಸಾಂಸ್ಥಿಕ ತ್ಯಾಜ್ಯ ಉತ್ಪಾದಕರಿಗೆ ಘನತ್ಯಾಜ್ಯ ನಿರ್ವಹಣಾ ಉಪವಿಧಿಗಳು 2020ರ ಶೆಡ್ಯೂಲ್-VI, ಭಾಗ-1 ಬಿ ರನ್ವಯ ಬಳಕೆದಾರರ ಶುಲ್ಕ (ಸೇವಾ ಶುಲ್ಕ)ವನ್ನು ಸಂಗ್ರಹಿಸಲು ತೀರ್ಮಾನಿಸಲಾಗಿರುತ್ತದೆ. ಪಾಲಿಕೆಯಲ್ಲಿ ನಿಗಧಿಸಲು ಯೋಜಿಸಲಾಗಿರುವ ಬಳಕೆದಾರರ ಶುಲ್ಕದ ವಿವರಗಳು ಈ ಕೆಳಕಂಡಂತಿವೆ:<br><br>
ಗೃಹತ್ಯಾಜ್ಯ ಉತ್ಪಾದಕರಿಗೆ ಬಳಕೆದಾರರ ಶುಲ್ಕ:
<table>
<tr><th>ಕ್ರ.ಸಂ</th><th>ವಿವರಗಳು</th><th>ನಿಗಧಿಪಡಿಸಿದ ಶುಲ್ಕ</th></tr>
<tr><td>1.</td><td>600 ಚ.ಅಡಿ ವರೆಗೆ ನಿರ್ಮಿತ ಕಟ್ಟಡಗಳಿಗೆ</td><td>ಪ್ರತಿ ಮಾಹೆಗೆ ರೂ. 20/-ಗಳು</td></tr>
<tr><td>2.</td><td>600 ಚ.ಅಡಿಯಿಂದ 1000 ಚ.ಅಡಿವರೆಗೆ ನಿರ್ಮಿತ ಕಟ್ಟಡಗಳಿಗೆ</td><td>ಪ್ರತಿ ಮಾಹೆಗೆ ರೂ. 50/-ಗಳು</td></tr>
<tr><td>3.</td><td>1000 ಚ.ಅಡಿ ಮೇಲ್ಪಟ್ಟು ಹಾಗೂ 2000 ಚ.ಅಡಿ ವರೆಗೆ ನಿರ್ಮಿತ ಕಟ್ಟಡಗಳಿಗೆ</td><td>ಪ್ರತಿ ಮಾಹೆಗೆ ರೂ. 100/-ಗಳು</td></tr>
<tr><td>4.</td><td>2000 ಚ.ಅಡಿ ಮೇಲ್ಪಟ್ಟು ಹಾಗೂ 3000 ಚ.ಅಡಿ ವರೆಗೆ ನಿರ್ಮಿತ ಕಟ್ಟಡಗಳಿಗೆ</td><td>ಪ್ರತಿ ಮಾಹೆಗೆ ರೂ. 150/-ಗಳು</td></tr>
<tr><td>5.</td><td>3000 ಚ.ಅಡಿ ಮೇಲ್ಪಟ್ಟು ಹಾಗೂ 4000 ಚ.ಅಡಿ ವರೆಗೆ ನಿರ್ಮಿತ ಕಟ್ಟಡಗಳಿಗೆ</td><td>ಪ್ರತಿ ಮಾಹೆಗೆ ರೂ. 200/-ಗಳು</td></tr>
<tr><td>6.</td><td>4000 ಚ.ಅಡಿಗಿಂತ ಮೇಲ್ಪಟ್ಟ ನಿರ್ಮಿತ ಕಟ್ಟಡಗಳಿಗೆ</td><td>ಪ್ರತಿ ಮಾಹೆಗೆ ರೂ. 400/-ಗಳು</td></tr>
</table>
</td>
</tr>
</table>

| | | |
|---|---|---|
| ಉ | ಗುತ್ತಿಗೆ ಸಂಸ್ಥೆಗಳಿಗೆ ಅಥವಾ ಕಂಪನಿಗಳಿಗೆ ಟಿಪ್ಪಿಂಗ್ ಶುಲ್ಕವಾಗಿ ಎಷ್ಟು ಶುಲ್ಕ ಪಾವತಿಸಲು ನಿರ್ಧರಿಸಲಾಗಿದೆ? (ವಿವರವನ್ನು ನೀಡುವುದು) | ಸಮಗ್ರ ಘನತ್ಯಾಜ್ಯ ನಿರ್ವಹಣೆಯನ್ನು ಪಿಪಿಪಿ ಮಾದರಿಯಲ್ಲಿ ನಿರ್ವಹಿಸಲು ಟೆಂಡರ್ ಆಹ್ವಾನಿಸಲಾಗಿದ್ದು, ಪ್ರತಿ ಟನ್ ತ್ಯಾಜ್ಯ ಸಂಗ್ರಹಣೆ ಮತ್ತು ಸಾಗಾಣಿಕೆಗೆ ರೂ. 2343/–ಗಳನ್ನು ನಿಗಧಿಪಡಿಸಲಾಗಿರುತ್ತದೆ. ಸಂಸ್ಕರಣೆ ಮತ್ತು ವಿಲೇವಾರಿ ಕಾರ್ಯಕ್ಕಾಗಿ ರೂ.655/–ಗಳನ್ನು ನಿಗಧಿಪಡಿಸಲಾಗಿರುತ್ತದೆ. |

**ಸಂಖ್ಯೆ: ನಅಇ 627 ಎಂಎಸ್‌ವೈ 2024 (ಇ)**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ